
# ಕಾವ್ಯಮಂಜರಿ




## ಆರಿಫ್ ರಾಜಾ

ಕಲೆ: ಎಸ್.ವಿ. ಹೂಗಾರ್

### ಕವಿತೆ

ಕಂಬನಿಯ ಅರ್ಥ ಕೇಳುತ್ತಿರುವೆಯಾ?
ಕಂಬನಿಯ ಅರ್ಥ
ಮಾತಿನಲಿ ಹೇಳುವಂತಿದ್ದರೆ
ಮತ್ತೆ, ನಾನೇಕೆ ಅಳುತ್ತಿದ್ದೆ?

ಮಾತು ಸೋತಾಗ
ಪ್ರೀತಿ ಹುಟ್ಟಿತು
ಪ್ರೀತಿ ಸೋತಾಗ
ಕಂಬನಿ...

ಕಂಬನಿ ಸೋತಾಗ?
ಕವಿತೆ!

ಕವಿತೆಗಿಲ್ಲ ಯಾವ ಭಾಷೆ
ಕವಿತೆಯದೇ ಒಂದು ಭಾಷೆ

ಕವಿತೆ ಮಾತಾನಾಡುತ್ತಿದೆ
ಇನ್ಯಾವ ರೀತಿಯಲ್ಲೂ ಮಾತನಾಡಲು
ಸಾಧ್ಯವಿಲ್ಲ ಅನಿಸಿದಾಗ
ಬಿಕ್ಕಿ ಬಿಕ್ಕಿ ಮಾತನಾಡುತಿದೆ!

ಈಗ ಹೇಳು
ಕಾಮನ ಬಿಲ್ಲಿಗೆ ಅರ್ಥ ಕೇಳುತ್ತಿರುವೆಯಾ?
ಅಥವಾ
ಕವಿತೆಯ ಅರ್ಥ ಹುಡುಕುತ್ತಿರುವೆಯಾ?

ಈ ಕವಿತೆಯ ಮೊದಲ ಚರಣ ಓಶೋ
ವಾಣಿಯ ಚುಂಗು ಹಿಡಿದು